ಶ್ರೀ ವಾಟಾಳ್ ನಾಗರಾಜ್: ಏಕೆಂದರೆ, ಈ ಪ್ರಶ್ನೆಯ ಬಗ್ಗೆ ಇದಕ್ಕೆ ಏನಾದರೂ ಬೆಲೆ ಇದೆಯಾ? ಗೌರವವಿದೆಯಾ?

ಅಧ್ಯಕ್ಷರು: ಹಿರಿಯ ಸದಸ್ಯರಾದ ನೀವುಗಳು ನಿಯಮಾವಳಿಗಳನ್ನು ಪಾಲಿಸದೆಯೇ ಹೀಗೆ ಎದ್ದುನಿಂತುಕೊಂಡು ಬಿಟ್ಟರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನಾನು ತಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ, ಯಾವ ಊರಿಗೆ ಕುಡಿಯುವ ನೀರಿಗಾಗಿ ಹಣವನ್ನು ಕೊಟ್ಟಿದ್ದಾರೆ? ಕೊಟ್ಟಿಲ್ಲ, ಇಲ್ಲಿ ಕುಡಿಯುವ ನೀರಿನ ಬಗ್ಗೆ ಸಮಗ್ರವಾಗಿ ಚರ್ಚೆಯಾಯಿತು. ಇದರ ಬಗ್ಗೆ ಒಂದಲ್ಲ, ಎರಡಲ್ಲ ಹತ್ತಾರು ಬಾರಿ ಚರ್ಚೆಯಾಯಿತು. ಚರ್ಚೆಗೆ ಉತ್ತರವನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೆ, ಮೊದಲು ಪ್ರಶ್ನೋತ್ತರವಾಗಲಿ, ಆಮೇಲೆ ಯೂ ಕ್ಯಾನ್ ರೈಸ್ ಇಟ್. ಮೊದಲು ಪ್ರಶ್ನೋತ್ತರ ಆಗಲಿ. ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಜಿ.ಎ.ಶ್ರೀರಾಮುಲು: ಮಾನ್ಯ ಸಭಾಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಏಕೆಂದರೆ ನಿನ್ನೆ ದಿನ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ಆಗಲಿ ನಂತರ ನಿಮಗೆ ಅವಕಾಶವನ್ನು ಕೊಡುತ್ತೇನೆ.

ಶ್ರೀ ಜಿ.ಎ.ಶ್ರೀರಾಮುಲು : ನಾನು ನಿನ್ನೆಯಿಂದ ಮಾತನಾಡುವುದಕ್ಕೆ ಅವಕಾಶವನ್ನು ಕೇಳುತ್ತಿದ್ದೇನೆ. ತಾವು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತಿಲ್ಲ, ನಮ್ಮ ಜಿಲ್ಲೆಯಲ್ಲಿ ಬಹಳ ಅನಾಹುತವಾಗುತ್ತಿದೆ.

ಅಧ್ಯಕ್ಷರು: ಆಯಿತು. ಹೊಸ ಸದಸ್ಯರುಗಳು ಈ ರೀತಿ ಮಾಡಿದರೆ ಹೇಗೆ? ಮೊದಲು ಪ್ರಶ್ನೋತ್ತರವಾಗಬೇಕು. ಪ್ರಶ್ನೋತ್ತರವಾದನಂತರ ನೀವು ಅವಕಾಶವನ್ನು ಕೇಳಬೇಕು.

151 (2552) **ಶ್ರೀ ಪದ್ಮನಾಭ ಕೊಟ್ಟಾರಿ ಕೆ. (ವಿಟ್ಲ)**

ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಕೊಳಚೆ ನಿರ್ಮಾಲನಾ ಮಂಡಳಿ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ವಿಟ್ಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವ ಗ್ರಾಮಗಳ ಸಂಖ್ಯೆ ಎಷ್ಟು ?

ಆ) ಕುಡಿಯುವ ನೀರಿನ ಕೊರತೆ ಎದುರಿಸುತ್ತಿರುವ ಈ ಗ್ರಾಮಗಳಿಗೆ ವಿವಿಧ ಯೋಜನೆಯಡಿಯಲ್ಲಿ ಸಮರ್ಪಕ ಕುಡಿಯುವ ನೀರಿನ ಸರಬರಾಜನ್ನು ಯಾವಾಗ ಒದಗಿಸಿಕೊಡಲಾಗುವುದು?

ಶ್ರೀ ಬಿ. ಸತ್ಯನಾರಾಯಣ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಕೊಳಚೆ ನಿರ್ಮಾಲನಾ ಮಂಡಳಿ ಸಚಿವರು) :-

ಅ) ವಿಟ್ಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಗ್ರಾಮ / ಜನವಸತಿಗಳಿಗೆ ಕನಿಷ್ಠ ಒಂದು ಕುಡಿಯುವ ನೀರಿನ ಯೋಜನೆ/ಜಲಮೂಲ ಒದಗಿಸಲಾಗಿದೆ.

ಆ) ಆಯಾ ಜನವಸತಿಗಳ ಜನಸಾಂದ್ರತೆ ಆಧರಿಸಿ ಬೇಸಿಗೆ ಕಾಲವೂ ಸೇರಿದಂತೆ ಕುಡಿಯುವ ನೀರು ಪೂರೈಕೆಯಲ್ಲಿ ಸಮಸ್ಯೆಯಾಗದಂತೆ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಪಂಚಾಯತ್ ಸೂಕ್ತ ಕ್ರಮ ಕೈಗೊಂಡಿದೆ. ಒಂದು ವೇಳೆ ಅಂತರ್ಜಲ ಮಟ್ಟ ಕುಸಿತದಿಂದ ಹಾಲಿಯಿರುವ ಯೋಜನೆಗಳಿಂದ ನೀರು ಪೂರೈಕೆ ಸಮಸ್ಯೆಯಾದಲ್ಲಿ, ಅಗತ್ಯ ಪುನಃಶ್ಚೇತನ ಹಾಗೂ ಹೊಸ ಕಾಮಗಾರಿಗಳನ್ನು, ಜೊತೆ ಜೊತೆಯಲ್ಲಿ ಯೋಜನೆಗಳ ನಿರಂತರತೆಗಾಗಿ ಮಳೆನೀರಿನ ಕೊಯ್ಲು ಕಾರ್ಯಕ್ರಮಗಳನ್ನು ಆದ್ಯತೆ ಮೇಲೆ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ಕಾರ್ಯಪಡೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಪದ್ಮನಾಭ ಕೊಟ್ಟಾರಿ ಕೆ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಕುಡಿಯುವ ನೀರಿಗಾಗಿ ಈಗ ಜಿಲ್ಲಾ ಪಂಚಾಯತ್ ವತಿಯಿಂದ ಯಾವುದರಲ್ಲಿ ಕೊರತೆ ಇದೆ ಅದಕ್ಕೆ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಆದರೂ ಕೂಡ ಒಂದು ಗ್ರಾಮದಲ್ಲಿ ನೀರು ಸರಬರಾಜು ಯೋಜನೆ ಇದ್ದರೆ ಇಡೀ ಗ್ರಾಮಕ್ಕೆ ನೀರು ಸರಬರಾಜು

ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈಗಾಗಲೇ ಕೊಳವೆ ಬಾವಿಗಳಿಂದ ನೀರನ್ನು ತೆಗೆದು ಟ್ಯಾಂಕಿಗೆ ತುಂಬಿಸಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿರುವುದು. ಒಂದು ಕೊಳವೆ ಬಾವಿ ಒಂದು ವರ್ಷದೊಳಗೆ ಬತ್ತಿಹೋಗುತ್ತಿದೆ, ಇದಕ್ಕಾಗಿ ಬದಲಿ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ನನ್ನ ಕ್ಷೇತ್ರದ ಪರವಾಗಿ ಹಾಗೂ ಜನಗಳ ಪರವಾಗಿ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಬಿ. ಸತ್ಯನಾರಾಯಣ್: ಸನ್ಮಾನ್ಯ ಅಧ್ಯಕ್ಷರೆ, ನಾವು ಈಗಾಗಲೇ ಸರ್ಕಾರದ ವತಿಯಿಂದ ಸುತ್ತೋಲೆಯನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆಯನ್ನು ರಚನೆ ಮಾಡಿದ್ದೇವೆ. ತುರ್ತು ತೊಂದರೆಗಳನ್ನು ನಿವಾರಣೆ ಮಾಡುವ ಬಗ್ಗೆ ಆ ಕಾರ್ಯಪಡೆಗೆ ಸಂಪೂರ್ಣ ಅಧಿಕಾರವನ್ನು ಕೊಟ್ಟಿದ್ದೇವೆ. ಅಂತಹ ಒಂದು ತಾತ್ಕಾಲಿಕವಾದಂತಹ ತೊಂದರೆಗಳನ್ನು ಅದಕ್ಕಾಗಿ ಮಾನ್ಯ ಶಾಸಕರೇ ಅಧ್ಯಕ್ಷರಾಗಿದ್ದಾರೆ, ಅವರೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾದಂತಹ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹಣವನ್ನು ಬಿಡುಗಡೆ ಮಾಡಿಲ್ಲ, ರಿಪೇರಿಗೆ ಹಣವಿಲ್ಲ, ಅಲ್ಲಿ ಹೊಸ ಕೊಳವೆ ಬಾವಿಗಳನ್ನು ತೋಡುವುದಕ್ಕೆ ಹಣವಿಲ್ಲ, ಸುಮ್ಮನೆ ಪುಕಸಟ್ಟೆ ನಾವು ಬಹಳ ಅನುಕೂಲವನ್ನು ಮಾಡಿದ್ದೇವೆ. ಇದಕ್ಕೊಂದು ಪಡೆ ರಚನೆ ಮಾಡಿದ್ದೇವೆ ಇದರಲ್ಲಿ ಏನೂ ಮೂರು ಕಾಸು ಪ್ರಯೋಜನವಿಲ್ಲ. ನನ್ನ ಕ್ಷೇತ್ರ ಒಂದರಲ್ಲಿಯೇ 600 ಕೊಳವೆ ಬಾವಿಗಳು ಕೆಟ್ಟಿದೆ, ನನ್ನ ಜಿಲ್ಲೆಯಲ್ಲಿ 2000 ಕೊಳವೆ ಬಾವಿಗಳು ಕೆಟ್ಟಿವೆ, ಇಡೀ ರಾಜ್ಯದಲ್ಲಿ 70 ಸಾವಿರ ಕೊಳವೆ ಬಾವಿಗಳು ಕೆಟ್ಟಿದೆ. ನಾನು ಎಲ್ಲಾ ಕಡೆಗಳಿಂದ ಮಾಹಿತಿಯನ್ನು ತರಿಸಿದ್ದೇನೆ. ಇದು ಬಹಳ ಅನ್ಯಾಯ. ಮಾನ್ಯ ಮಂತ್ರಿಗಳು ಸದನದಲ್ಲಿ ಪ್ರಾಮಾಣಿಕವಾಗಿ ಹೇಳಬೇಕು, ಇದರಲ್ಲಿನಿಜಕ್ಕೂ ಅನ್ಯಾಯವಾಗಿದೆ, ಇದು ಒಳ್ಳೆಯ ರೀತಿಯಲ್ಲ, ಕುಡಿಯುವ ನೀರಿನ ಬಗ್ಗೆ ಸ್ಪಷ್ಟವಾದಂತಹ ನಿಲುವನ್ನು ಹೇಳಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಾಲ್ಲೂಕು ಮಟ್ಟದಲ್ಲಿ ಕಾರ್ಯಪಡೆಯನ್ನು ಮಾಡಿದ್ದೇನೆ, ಅದಕ್ಕೆ ಶಾಸಕರೇ ಅಧ್ಯಕ್ಷರು, ನೀವೇ ನಿಭಾಯಿಸಬೇಕೆಂದು ಹೇಳಿದ್ದೀರಿ. ಇದರ ಬಗ್ಗೆ ಕಳೆದ ಅಧಿವೇಶನದಲ್ಲಿ ವ್ಯಾಪಕವಾದಂತಹ ಚರ್ಚೆಯಾಯಿತು. ತಾವು ಯಾವುದಾದರೂ ತಾಲ್ಲೂಕಿನಲ್ಲಿ ಯಾವುದಾದರೂ ಶಾಸಕರ

ಅಧ್ಯಕ್ಷತೆಯಲ್ಲಿ 5 ಲಕ್ಷ ರೂಪಾಯಿಗಳ ಕೆಲಸವನ್ನು ಮಾಡಿದ್ದೇವೆ, ನಾವು ಮಂಜೂರು ಮಾಡಿದ್ದೇವೆಂದು, 224 ಕ್ಷೇತ್ರದಲ್ಲಿ ಒಂದು ಉದಾಹರಣೆಯನ್ನು ತಾವು ಕೊಡಬೇಕು, ತಾವು ಹಣವನ್ನು ಕೊಡದೆ ಇವತ್ತು ಕೊಳವೆ ಬಾವಿಗಳನ್ನು ಡಿಪ್ಸ್ಸ್ ಮಾಡಲಿಲ್ಲ, ಅಂತರಜಲ ಕುಸಿದುಹೋಗಿದೆ, ಕುಡಿಯುವ ನೀರಿಗಾಗಿ ಆಹಾಕಾರವಾಗಿದೆ, ಕೆರೆಕಟ್ಟೆಗಳು ಬತ್ತಿಹೋಗಿವೆ, ಯಾವುದೇ ತಾಲ್ಲೂಕಿನಲ್ಲಿ ಯಾವುದೇ ಊರಿನಲ್ಲಿ ನಮ್ಮ ಚುನಾಯಿತ ಪ್ರತಿನಿಧಿಗಳು ಓಡಾಡುವುದಕ್ಕೆ ಆಗದಂತಹ ಪರಿಸ್ಥಿತಿ ಇದೆ, ನಾವು ಕಾರ್ಯಪಡೆಯನ್ನು ರಚಿಸಿದ್ದೇವೆಂದು ಹೇಳುತ್ತೀರಿ, ಹಣವನ್ನು ಎಲ್ಲಿ ಕೊಟ್ಟಿದ್ದೀರಿ? ಹೇಳಿ, ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ, ನಾವು ಜಿಲ್ಲಾಧಿಕಾರಿಗಳನ್ನು ಕೇಳುವುದಕ್ಕೆ ಹೋದರೆ ಅವರು ಹಣವಿಲ್ಲವೆಂದು ಹೇಳುತ್ತಾರೆ. ಒಂದು ಸಭೆಯಲ್ಲೂ ಆಗಿಲ್ಲ, 10 ಬೋರ್‌ವೆಲ್‌ಗಳನ್ನು ಎಲ್ಲೂ ತೆಗೆಯುವುದಕ್ಕೆ ಆಗಲಿಲ್ಲ, ಕೊಳವೆ ಬಾವಿಗಳನ್ನು ಡಿಪ್ಸ್ಸ್ ಮಾಡುವುದಕ್ಕೆ ಆಗಲಿಲ್ಲ, ಇದು ಕಣ್ಣೀರಿನ ಕರ್ಮಕಥೆ ಸ್ವಾಮಿ, ತಾವು ಸಮಾಧಾನವಾಗಿ ಇಲ್ಲಿ ಹೀಗೆ ಹೇಳಿದರೆ ನಾವು ಏನು ಮಾಡಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಕಾರ್ಯಪಡೆಯನ್ನು ಮಾಡಿರುವುದು ಕ್ರಮಬದ್ಧವಾಗಿಲ್ಲ. ಏನೂ ಟಾಸ್ಕ್‌ಫೋರ್ಸ್ ಇತ್ತು, ಅದರ ಮೇಲೆ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ ತಾತ್ಕಾಲಿಕವಾದ ವ್ಯವಸ್ಥೆಯನ್ನು ಮಾಡಿ ಎಂದರೆ ಎಲ್ಲಾ ಜಿಲ್ಲಾ ಪಂಚಾಯಿತಿಯ ಸದಸ್ಯರುಗಳು, ಟಿಪಿಎಸ್ ಅಧ್ಯಕ್ಷರು, ಟಿಪಿಎಸ್ ಉಪಾಧ್ಯಕ್ಷರು, ಎಲ್ಲಾ ಆಫೀಸರ್ಸ್ ಒಳಗೊಂಡು ಅದೊಂದು ದೊಡ್ಡದಾದ ಮಿನಿ ಸಂತೆಯನ್ನಾಗಿ ಮಾಡಿಬಿಟ್ಟಿದ್ದಾರೆ. ಅಲ್ಲಿ ಡಿಸ್‌ಕಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ನಾನು ಸನ್ಮಾನ್ಯ ಸಚಿವರ ಗಮನಕ್ಕೆ ತರುವುದೇನೆಂದರೆ, ತುರ್ತು ಕಾರ್ಯಗಳನ್ನು ನಾವು ಮಾಡಬೇಕಾಗಿದೆ, ಒಂದು ದಿವಸಕ್ಕೆ ಮತ್ತು ಎರಡು ದಿವಸಕ್ಕೆ ಮಾಡಬೇಕಾಗಿದ್ದರೆ ಎಲ್ಲೋ ಬೋರನ್ನು ಹಾಕಿಸಬೇಕಾಗಿರುತ್ತದೆ, ಸ್ವಲ್ಪ ನಮಗೆ ಅಧಿಕಾರವನ್ನು ಕೊಡಿ ಎಂದರೆ ಜಿಲ್ಲಾ ಪರಿಷತ್ ಸದಸ್ಯರುಗಳನ್ನು, ಟಿಪಿಎಸ್‌ನವರನ್ನು, ಎಲ್ಲಾ ಸದಸ್ಯರುಗಳನ್ನು ಸಭೆಗೆ ಕರೆದುಕೊಂಡು ನಿರ್ಣಯಗಳನ್ನು ತೆಗೆದುಕೊಂಡು ಬರಗಾಲದ ಪರಿಸ್ಥಿತಿಯನ್ನು ನಿಭಾಯಿಸುವುದಕ್ಕೆ ಆಗುತ್ತದೆಯಾ? ಅದಕ್ಕೇನಾದರೂ ಟಾಸ್ಕ್‌ಫೋರ್ಸ್ ಎಂದು ಕರೆಯುತ್ತಾರಾ? ಅದೆಲ್ಲ ಆ್ಯಂಬಿಟಲ್ ಏತಕ್ಕಾಗಿ ತರಬೇಕಾಗಿತ್ತು ಎಂದು ಉತ್ತರವನ್ನು ಹೇಳಬೇಕು, ಎರಡನೆಯದಾಗಿ ಹೇಳುವುದಾದರೆ ಇದಕ್ಕೆ ಫಂಡ್‌ನ್ನು ಕೊಡಲೇ ಇಲ್ಲ, ಈಗ ಹೇಗಾದರೂ ಮಾಡಿ

ಶಾಸಕರ ಅಧಿಕಾರವನ್ನು ಡೈಲ್ಯೂಟ್ ಮಾಡಲೇಬೇಕೆನ್ನುವಂತಹ ಹುನ್ನಾರ ಇಲ್ಲಿ ನಡೆಯುತ್ತಿದೆ. ಇದಕ್ಕೆ ಎರಡು ಮಾತಿಲ್ಲ, ಪಂಚಾಯಿತಿಗೆ ಏತಕ್ಕೆ ಕೊಟ್ಟಿರಿ ಎನ್ನುವ ರೀತಿಯಲ್ಲಿ ಹೀಗೆ ಮಾಡಿದ್ದೀರಿ. ಒಟ್ಟು ನಮ್ಮ ಕೈಕಾಲುಗಳನ್ನು ಕಟ್ಟಿಹಾಕಿಬಿಟ್ಟು ನಮ್ಮನ್ನು ಅಲ್ಲಿಯೇ ಸಿಕ್ಕಿಸಬೇಕೆಂದು ಒಂದು ಹುನ್ನಾರವೇ ಸರ್ಕಾರವೇ ಮಾಡುವುದಾದರೆ, ದಯಮಾಡಿ ನಮಗೆ ಅದು ಬೇಡ ಸಾರ್. ಇದು ಬೇಡವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಿಮ್ಮನ್ನು ಕಾಡಿ, ಬೇಡಿ ಗೋಗೊರೆದು ನಾವು ಕುಳಿತುಕೊಂಡು ನಾವು ಭೇಷ್ ಅನ್ನಿಸಿಕೊಳ್ಳಬೇಕಾಗಿಲ್ಲ. ತಾವು ಆ ಸುತ್ತೋಲೆಯನ್ನು ತರಿಸಿಕೊಂಡು ಓದಬೇಕಾಗಿದೆ. ಇಡೀ ವ್ಯವಸ್ಥೆಯನ್ನೇ ಅದರ ಕೆಳಗಡೆಗೆ ತಂದು ಟಾಸ್ಕ್‌ಫೋರ್ಸ್ ಎಂದು ಏತಕ್ಕಾಗಿ ಕರೆಯುತ್ತೀರಿ? ಇದನ್ನು ನೋಡಿದರೆ ಒಂದು ರೀತಿಯಲ್ಲಿ ರೆಗ್ಯುಲರ್ ಕಮಿಟಿ ತರಹ ಇದೆ. ಅದು ಟಾಸ್ಕ್‌ಫೋರ್ಸ್ ಆಗುತ್ತದೆಯೇ? ಯಾರಿಗಾದರೂ ಅದರ ಮೇಲೆ ನಂಬಿಕೆ ಇಟ್ಟು, ಡಿಸ್‌ಕ್ರಿಷನ್ ಕೊಟ್ಟು ತಕ್ಷಣ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಏನಾದರೂ ಒಂದು ಆದೇಶವನ್ನು ನೀವು ಪಾಸು ಮಾಡುವುದಕ್ಕೆ ಆಗುತ್ತದೆಯಾ ಅಥವಾ ಇಲ್ಲವಾ ಮತ್ತೇ ಅದಕ್ಕಾಗಿ ಹಣವನ್ನು ಕೊಡುವುದಕ್ಕೆ ಆಗುತ್ತದೆಯಾ ಇಲ್ಲವಾ ಎನ್ನುವ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಕೆ. ಎಶ್ವೇಶ್ವರಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ಎಂದು ಮಾಡಿ, ಶಾಸಕರನ್ನು ಆಟಕ್ಕೆ ಉಂಟು, ಲೆಕ್ಕಕ್ಕೆ ಇಲ್ಲ ಸ್ಥಿತಿಗೆ ತಂದಿಟ್ಟಿದ್ದಾರೆ. ಕೇಳಿದರೆ ಇದು ಶಾಸಕರ ಅಧ್ಯಕ್ಷತೆಯಲ್ಲಿ ಕಮಿಟಿ ಎಂದು ಹೇಳುತ್ತಾರೆ, ಆ ಕಮಿಟಿಯ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಎಲ್ಲರನ್ನು ಸೇರಿಸಿ ಜಾತ್ರೆ ಮಾಡಿಟ್ಟಿದ್ದಾರೆ. ಅದರ ಮಧ್ಯದಲ್ಲಿ ಹಣ ಬಿಡುಗಡೆ ಇಲ್ಲ. ಕೇಳಿದರೆ ಶಾಸಕರ ಅಧ್ಯಕ್ಷತೆ ಎನ್ನುವ ಮಾತನ್ನು ಆಡುತ್ತಾರೆ. ಊರಿನಲ್ಲಿ ನಾವು ಬೈಸಿಕೊಳ್ಳುವುದಕ್ಕಾಗಿ ಅಧ್ಯಕ್ಷರಾಗಿದ್ದೇವಾ? ನಮ್ಮ ಪರಿಸ್ಥಿತಿಯ ಬಗ್ಗೆ ಹೇಳುವುದು ಬೇಡ, ನೀವು ಅಧ್ಯಕ್ಷರು, ನಾವೆಲ್ಲರೂ ಅಧ್ಯಕ್ಷರನ್ನಾಗಿ ಮಾಡಬೇಕು ಹಣವನ್ನು ಕೊಡಬೇಕೆಂದು ಹೇಳಿದರೆ, ಅಧ್ಯಕ್ಷರನ್ನಾಗಿ ಮಾಡಿದರು, ಅದಕ್ಕೆ ಹಣವನ್ನು ಕೊಡಲೇ ಇಲ್ಲ, ಊರಿನಲ್ಲಿ ನಾವು ಬೈಸಿಕೊಳ್ಳುವಂತಹ ಸ್ಥಿತಿ ಬಂದಿದೆ. ಕುಡಿಯುವ ನೀರಿನ ಅಭಾವ ಎಷ್ಟು ದೊಡ್ಡದಾಗಿದೆ, ಇವತ್ತು ರಾಜ್ಯದ ಪರಿಸ್ಥಿತಿಯ ಬಗ್ಗೆ ಎಲ್ಲರಿಗೂ ಗೊತ್ತಿದೆ, ಮಳೆಯಿಲ್ಲದೆ ಬರಗಾಲದ ಪರಿಸ್ಥಿತಿಯಿಂದ ಅಂತರಜಲ ಇಲ್ಲದೆ ನೀರಿಗಾಗಿ ದೊಡ್ಡ ಆಹಾಕಾರವಿದೆ ಇಂತಹ ಸಂದರ್ಭದಲ್ಲಿ ಇವರು ಹಣವನ್ನು ಬಿಡುಗಡೆ ಮಾಡುವುದಿಲ್ಲ ಇವರು ಆರ್ಥಿಕವಾಗಿ ಬಜೆಟ್ ಉಳಿತಾಯದ ಬಜೆಟ್ ಎಂದು ಹೇಳುತ್ತಾರೆ,

ಉಳಿತಾಯದ ಬಜೆಟ್ ಮಾಡಿಕೊಂಡು ಇವರು ಏನು ಮಾಡುತ್ತಾರೆ? ರಾಜ್ಯದ ಜನರು ಕುಡಿಯುವುದಕ್ಕೆ ನೀರಿಲ್ಲದ ಸಂದರ್ಭದಲ್ಲಿ ಏನು ಮಾಡುತ್ತಾರೆ? ಏನು ಹಣವನ್ನು ಉಳಿಸಿಕೊಳ್ಳುವುದಕ್ಕಾಗಿ ಸರ್ಕಾರ ಬಂದಿರುವುದಾ? ಸಾಲವನ್ನಾದರೂ ಮಾಡಿಕೊಂಡು ಕುಡಿಯುವುದಕ್ಕೆ ನೀರು ಕೊಡಿ, ಅದನ್ನು ಬಿಟ್ಟು ಹಣವನ್ನು ಉಳಿತಾಯ ಮಾಡಿ ತಾವು ಏನು ದೊಡ್ಡ ಹೆಸರು ತೆಗೆದುಕೊಳ್ಳುತ್ತೀರಿ, ಮೊದಲು ಕುಡಿಯುವುದಕ್ಕೆ ನೀರನ್ನು ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ,.....

ಶ್ರೀ ಹೆಚ್.ಡಿ.ಬಸವರಾಜು : ಮಾನ್ಯ ರೆಡ್ಡಿಯವರೇ ಒಂದೇ ಒಂದು ನಿಮಿಷ ಸಾರ್. ಆ ಕಮಿಟಿಯಲ್ಲಿ 15 ರಿಂದ 20 ಜನರಿದ್ದೇವೆ, ಆ ಸಮಿತಿಗೆ ಕೊಟ್ಟಿರುವಂತಹ ಹಣ ಎಷ್ಟೆಂದರೆ ಬರೀ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಎರಡು ಲಕ್ಷ ರೂಪಾಯಿಗಳನ್ನು ಇಟ್ಟುಕೊಂಡು 15–20 ಜನ ಸದಸ್ಯರು ಆ ಸಮಿತಿಯಲ್ಲಿ ತೀರ್ಮಾನ ಮಾಡಬೇಕೆಂಬ ಉದ್ದೇಶವಿದ್ದರೆ ಇದರ ಮರ್ಮವೇನು? ನಿಮಗೆ ನಿಜವಾಗಲೂ ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂಬ ಉದ್ದೇಶವಿದ್ದಿದ್ದರೆ ಹಣವನ್ನು ನೀವು ಸರಿಯಾಗಿ ಒದಗಿಸುತ್ತಿದ್ದಿರಿ. ಎರಡು ಲಕ್ಷ ರೂ.ಗಳನ್ನು ಕೊಟ್ಟು ನೀವು ಟಾಸ್ಕ್‌ಫೋರ್ಸ್ ಸಮಿತಿಯನ್ನು ರಚನೆ ಮಾಡಿ ಅಂದರೆ ಹೇಗೆ? ನನ್ನ ತಾಲೂಕಾದ ವಿರಾಜಪೇಟೆಗೆ 2.00 ಲಕ್ಷ ರೂಪಾಯಿ ಕೊಟ್ಟಿದ್ದೀರಿ, ನೀವು ಒಬ್ಬರು ಶಾಸಕರು ಆಗಿದ್ದೀರಿ ಹಾಗೂ ಮಂತ್ರಿಗಳಾಗಿದ್ದೀರಿ, ನಿಮಗೆ ಈ ರೀತಿ ಅನುದಾನವನ್ನು ಕೊಟ್ಟಿದ್ದರೆ ನೀವು ಹೇಗೆ ನಿಭಾಯಿಸುತ್ತಿದ್ದಿರಿ? ನಿಜವಾಗಲೂ ನಿಮಗೆ ಕಳಕಳಿಯಿದ್ದರೆ ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಂತ್ರಿಗಳಾಗಿದ್ದರೆ ಹೇಗೆ ನಿಭಾಯಿಸುತ್ತಿದ್ದಿರಿ? ಶಾಸಕರಾಗಿದ್ದರೆ ಹೇಗೆ ನಿಭಾಯಿಸುತ್ತಿದ್ದಿರಿ? ಅಂತ ಈ ರೀತಿಯ ದಬಾವಣೆ ಮಾತುಗಳನ್ನು ಆಡಬೇಡಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಾನು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ದಬಾವಣೆ ಮಾಡುತ್ತಿದ್ದೇನೆಂದು ತಾವು ತಪ್ಪು ತಿಳಿದುಕೊಳ್ಳಬೇಡಿ, ನಿಮ್ಮ ಬಗ್ಗೆ ಹಾಗೂ ಎಲ್ಲಾ ಮಂತ್ರಿಗಳ ಬಗ್ಗೆ ಕೂಡ ನನಗೆ ಗೌರವ ಇದೆ. ಆದರೆ ನನ್ನ ನೋವನ್ನು ಯಾರ ಹತ್ತಿರ ಹೇಳಬೇಕು? ಗೌರವಯುತವಾದ ರೀತಿಯಲ್ಲಿ ನಾವು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನೀವು ಹೇಗೆ ಮಾತಾಡುತ್ತಿದ್ದೀರಿ? ನೀವಾದರೆ ಹೇಗೆ ನಿಭಾಯಿಸುತ್ತಿದ್ದಿರಿ ಅಂತ ದಬಾವಣೆ ಮಾತುಗಳನ್ನು ನೀವು ಏಕೆ ಆಡುತ್ತಿದ್ದೀರಿ.

ಅಧ್ಯಕ್ಷರು : ನೀವು ಎಲ್ಲರೂ ಮಾತನಾಡಲಿಕ್ಕೆ ಆರಂಭಿಸಿದರೆ ಹೇಗೆ? ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಾವು ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇವೆ. ದಯವಿಟ್ಟು ತಪ್ಪು ತಿಳಿದುಕೊಳ್ಳಬೇಡಿ. ನಮಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ. ಇಲ್ಲಿ ತಮ್ಮನ್ನು ದಬಾವಣೆ ಮಾಡುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನೀವು ವ್ಯಂಗ್ಯವಾಗಿ ಈ ಮಾತನಾಡುತ್ತಿದ್ದೀರಿ. ನೀವು ಮಂತ್ರಿಗಳಾಗಿದ್ದರೆ ಏನು ಮಾಡುತ್ತಿದ್ದೀರಿ ಅಂತ ದಬಾವಣೆ ಮಾಡುತ್ತಿದ್ದೀರಿ.

ಶ್ರೀ ಹೆಚ್.ಡಿ.ಬಸವರಾಜು: ತಮ್ಮನ್ನು ವ್ಯಂಗ್ಯವಾಗಿ ಗುರುತಿಸಿ ಮಾತನಾಡುತ್ತಿಲ್ಲ. ನಮ್ಮ ನೋವನ್ನು ಅರ್ಥ ಮಾಡಿಕೊಂಡು ಅದಕ್ಕೆ ತಕ್ಕ ಪರಿಹಾರವನ್ನು ನೀಡಿ ಅಂತ ಕೇಳಿಕೊಳ್ಳುತ್ತಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಮಗೆ ಬರೇ ಅಧ್ಯಕ್ಷತೆ ಕೊಡುವುದಾದರೆ ನಮಗೆ ಬೇಡ. ತೆಗೆದುಹಾಕಿಬಿಡಿ, ಏಕೆಂದರೆ ಅಧ್ಯಕ್ಷತೆ ವಹಿಸಲಿಕ್ಕೆ ಈ ಚೇರ್ ಮೇಲೆ ಕುಳಿತುಕೊಳ್ಳುವುದಕ್ಕಾಗಿ ಮಾತ್ರ ಅದನ್ನು ಮಾಡಿದ್ದೀರಿ ಅಂತ ಕಾಣುತ್ತದೆ. ಅದೇ ಉದ್ದೇಶವಿದೆಯೆಂದು ಅನಿಸುತ್ತದೆ. ಏಕೆಂದರೆ ಜಿಲ್ಲಾ ಪಂಚಾಯತ್ ಸದಸ್ಯರು, ತಾಲೂಕು ಪಂಚಾಯತ್ ಸದಸ್ಯರು, ಟಿ.ಪಿ.ಎಸ್. ಅಧ್ಯಕ್ಷರು, ಎಲ್ಲರನ್ನೂ ಸೇರಿಸಿ ಒಂದು ಸಭೆ

ಮಾಡಿ ತೀರ್ಮಾನ ತೆಗೆದುಕೊಳ್ಳಿ. ಅಂದರೆ ಆಗುವುದಿಲ್ಲ, ಇದು ಟಾಸ್ಕ್‌ಫೋರ್ಸ್ ಆಗುವುದಿಲ್ಲ. ಶಾಸಕರೆಲ್ಲಾ ಸೇರಿ ಗಲಭೆ ಮಡಿದ್ದಾರೆ ಎಂದು ಏನೋ ಒಂದು ಅಧ್ಯಕ್ಷತೆ ವಹಿಸಲಿಕ್ಕೆ ಮಾತ್ರ ನಮ್ಮನ್ನು ಅಲ್ಲಿ ಕೂರಿಸುವ ಹಾಗಿದ್ದರೆ ದಯವಿಟ್ಟು ಆ ಕೆಲಸ ಬೇಡ, ತೆಗೆದುಬಿಡಿ ಇಲ್ಲದಿದ್ದರೆ ಅದನ್ನೆಲ್ಲಾ ಅಮೆಂಡ್‌ಮೆಂಟ್ ಮಾಡಿ ಜಿಲ್ಲಾ ಪಂಚಯತ್ ಸದಸ್ಯರು ರಿಯಲ್ ಟಾಸ್ಕ್‌ಫೋರ್ಸ್ ಅಂದರೆ ಏನು? ಎಮರ್ಜೆನ್ಸಿಗೆ ತೀರ್ಮಾನ ತೆಗೆದುಕೊಳ್ಳುವಂತಹ ಅಧಿಕಾರವನ್ನು ಕೊಡತಕ್ಕಂಥದ್ದು ನಾವು ಅದನ್ನು ಕೇಳಿದರೆ ನೀವು ಸಂತೆ, ಜಾತ್ರೆ ಮಾಡಿಬಿಟ್ಟು ನೀವು ಅಧ್ಯಕ್ಷತೆ ವಹಿಸಿ ಅಂತ ಹೇಳಿದರೆ ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಮೀಟಿಂಗ್ ಆದ ಹಾಗೆ ಆಗುತ್ತದೆ. ನಾವು ಏನು ತೀರ್ಮಾನ ಮಾಡಲಿಕ್ಕೆ ಆಗುವುದಿಲ್ಲ. ಅದೇ ರೀತಿ ಇರುವುದಾದರೆ ಬೇಡ, ದಯವಿಟ್ಟು ಅದನ್ನು ತೆಗೆದುಬಿಡಿ.

ಶ್ರೀ ಜಯಪ್ರಕಾಶ್. ಹೆಗ್ಡೆ. ಕೆ. : ಸತ್ಯನಾರಾಯಣ್‌ರವರೇ ಎಲ್ಲರ ಮಾತು ಕೇಳಿ ದಯವಿಟ್ಟು ಉತ್ತರವನ್ನು ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಉತ್ತಮವಾದ ಸಲಹೆಗಳನ್ನು ಕೊಡುತ್ತಿದ್ದಾರೆ. ನಾನೇ ಶಾಸಕನಾಗಿದ್ದರೂ ಅದೇರೀತಿ ಪ್ರತಿಪಾದನೆಯನ್ನು ಮಾಡುತ್ತಿದ್ದೆನು. ಸರ್ಕಾರದ ಕೆಲವು ಇಬ್ಬಂದಿಗಳಿವೆ. ಅಧಿಕಾರದ ವಿಕೇಂದ್ರೀಕರಣದ ವಿಚಾರದಲ್ಲಿ ಒಪ್ಪಿತವಾಗಿರತಕ್ಕಂತಹ ವಿಷಯ. ನಮಗೆ ಅಧಿಕಾರ ಕೊಡದಿದ್ದರೆ ನಾವು ಶಾಸಕರಿಗೆ ಹೇಗೆ ಉತ್ತರವನ್ನು ಕೊಡುವುದು. ಅವರೆಲ್ಲಾ ಹೇಳುತ್ತಿದ್ದಾರೆ. ನಾವು ಅದನ್ನು ಕೇಳುತ್ತಿದ್ದೇವೆ. ಅದರ ಬಗ್ಗೆ ಒಂದು ನಿರ್ಣಯಕ್ಕೆ ಬರಬೇಕಾಗುತ್ತದೆ. ಅವರು ಹೇಳುವ ಉದ್ವೇಗದಲ್ಲಿ ನೀವು ಮಂತ್ರಿಗಳಾಗಿದ್ದರೆ ಏನು ಮಾಡುತ್ತಿದ್ದಿರಿ, ? ನೀವು ಮಂತ್ರಿಗಳಾಗಿದ್ದಾಗ ಈ ಪರಿಸ್ಥಿತಿ ಬಂದಿದ್ದರೆ ಏನು ಮಾಡುತ್ತಿದ್ದಿರಿ? ನಾವೇನು ಕೊಳ್ಳಿ ಹೊಡೆದುಕೊಂಡು ಹೋಗಿಬಿಡುತ್ತಿದ್ದೆವೆ ಅದೇ ತಪ್ಪೇನು.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ತಪ್ಪು ತಿಳಿದುಕೊಂಡಿದ್ದೀರಿ. ನೀವು ಒಂದು ವೇಳೆ ಮಂತ್ರಿಗಳಾಗದೆ ಶಾಸಕರಾಗಿದ್ದರೆ ಏನು ಮಾಡುತ್ತಿದ್ದೀರಿ ಅಂತ ಯೋಚನೆ ಮಾಡಿ. ....

ಶ್ರೀ ಎಂ.ಪಿ. ಪ್ರಕಾಶ್ : Is there any privilege? We are as much like as you are.

ಶ್ರೀ ಬಿ.ಎಸ್.ಯಡಿಯೂರಪ್ಪ : ಹೋದ ಅಧಿವೇಶನದಲ್ಲಿ ನಾವು ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಹುಡುಕಬೇಕೆನ್ನುವ ಉದ್ದೇಶದಿಂದ ದಿವಸಗಟ್ಟಲೆ ನಾವೆಲ್ಲಾ ಚರ್ಚೆ ಮಾಡಿದ್ದೆವು. ಚರ್ಚೆಯಾದ ಮೇಲೆ ನಾವು ವಾಪಸ್ಸು ನಮ್ಮ ಕ್ಷೇತ್ರಕ್ಕೆ ಹೋದೆವು. ಅಲ್ಲಿಂದ ಇಲ್ಲಿಯವರೆಗೆ ನನ್ನ ಶಿಕಾರಿಪುರ ತಾಲೂಕು ಅಥವಾ ಯಾವುದೇ ಸ್ಥಳದಲ್ಲಿ ಒಂದು ಬೋರ್‌ವೆಲ್ ತೆಗೆಸಲಿಕ್ಕೆ ಸಾಧ್ಯವಾಗಿಲ್ಲ. ದುಡ್ಡು ಕೊಟ್ಟಿದ್ದಾರೆ ಅಥವಾ ಬೋರ್‌ವೆಲ್ ತೆಗೆಯಲಿಕ್ಕೆ ಆಗಿಲ್ಲ. ಯಾವಾಗ ಕೇಳಿದರೂ ನೀವು ಹೊಸದಾಗಿ ಬೋರ್‌ವೆಲ್ ತೆಗೆಯಬಾರದು ಅಂತ ಹೇಳುತ್ತೀರಿ. ಈಗಿರುವ ಬೋರ್‌ವೆಲ್‌ಗಳಲ್ಲಿ ನೀರು ತಳ ಹಿಡಿದಿದೆ. ಒಂದು ಹನಿ ನೀರು ಬರುತ್ತಿಲ್ಲ. ಈ ರೀತಿ ಕುಡಿಯುವ ನೀರಿಗೆ ಹಾಹಾಕಾರ ಇರಬೇಕಾದರೆ ಶಾಸಕರಾಗಿ ನಾವು ಏನು ಉತ್ತರವನ್ನು ಕೊಡಬೇಕು ನೀವೇ ಹೇಳಿ ? ಅಕ್ಟುಯಲಿ ನಾವು ಸರ್ಕಾರಕ್ಕೆ ಕೋ–ಅಪರೇಟ್ ಮಾಡುತ್ತಿದ್ದೇವೆ. ಇವತ್ತಿನ ರಾಜ್ಯದಲ್ಲಿರುವ ಕುಡಿಯುವ ನೀರಿನ ಹಾಹಾಕಾರ ಇರುವ ದಾರುಣ ಪರಿಸ್ಥಿತಿಯಲ್ಲಿ ನಾವು ಇಲ್ಲಿ ಒಂದು ನಿಮಿಷ ಸುಮ್ಮನೆ ಕುಳಿತುಕೊಳ್ಳುವ ಹಾಗಿಲ್ಲ. ಒಂದು ಅಧಿವೇಶನ ಹೋಗಿ ಇನ್ನೊಂದು ಅಧಿವೇಶನ ಬಂತು. ಅದಕ್ಕೆ ಪರಿಹಾರವಾಗಿ ಒಂದು 10.00 ಲಕ್ಷ ರೂಪಾಯಿ ಕೊಟ್ಟಿದ್ದೇವೆ ಇನ್ನು 10.00 ಲಕ್ಷ ರೂ. ಕೊಡುತ್ತೇವೆ ಅನ್ನುವುದು ಏನೂ ಇಲ್ಲವಲ್ಲ. ಕಾನೂನು ಹೇಳುತ್ತೀರಿ, ಬೋರ್‌ವೆಲ್ ತೆಗೆಯಬೇಡಿ ಅಂತ ಹೇಳಿದರೆ ನಾವೇನು ಮಾಡಬೇಕು ಹೇಳಿ. ನಾವು ಹೇಗೆ ಬದುಕುವುದು ನೀವೆ ಹೇಳಿ ? ಇಲ್ಲ ಯಡಿಯೂರಪ್ಪನವರೇ ಹೀಗೆ ಮಾಡಿದ್ದೇವೆ ಅಂತ ಹೇಳಿ.

ಶ್ರೀ ಎನ್. ಯೋಗೀಶ್ ಭಟ್ : ನಮ್ಮ ಜಿಲ್ಲಾಧಿಕಾರಿ ತಮಗೆ ವರದಿ ಕೊಟ್ಟಿದ್ದಾರೆ, ನೀವು 8 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದರೂ ನಮಗೆ ಒಂದು ನಯಾ ಪೈಸೆ ಬಿಡುಗಡೆ ಆಗಿಲ್ಲ. ಶಾಸಕರು ಹೇಗೆ ಕೆಲಸ ಮಾಡಬೇಕು.

ಅಧ್ಯಕ್ಷರು : ಈಗ ಮಾಧುಸ್ವಾಮಿಯವರು ಸಲಹೆ ಕೊಟ್ಟವೇಲೆ ಸತ್ಯನಾರಾಯಣ್‌ರವರು ಮಾತನಾಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಸವರಾಜು ಅವರು ಸ್ವಲ್ಪ ಆವೇಶದಲ್ಲಿ ಜೋರಾಗಿ ಮಾತನಾಡಿದರು ಅಷ್ಟೆ. ಒಂದು ವೇಳೆ ನೀವು ಮಂತ್ರಿಯಾಗದೆ ಇದ್ದು ನಮ್ಮಂತೆ ಶಾಸಕರಾಗಿದ್ದರೆ ಏನು ಮಾಡುತ್ತಿದ್ದಿರಿ ಅಂತ ಒಂದು ನಿಮಿಷ ಯೋಚನೆ ಮಾಡಿ ಅಂತ ಹೇಳಿದರು. ಅವರು ಏರಿದ ದನಿಯಲ್ಲಿ ಮಾತನಾಡಿದರೂ ಅಷ್ಟೆ ವಿನಃ ಕೆಟ್ಟ ಮಾತನ್ನು ಆಡಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಈ ರೀತಿಯ ವ್ಯಂಗ್ಯವಾದ ಮಾತುಗಳು ಬೇಡ. ಎಲ್ಲರೂ ಮಂತ್ರಿಗಳಾಗುತ್ತಾರೆ, ಮಂತ್ರಿಗಳಾದ ಮೇಲೆ ಏನಾದರೂ ಸ್ಪೆಷಲ್ ಪ್ರಿವಿಲೇಜಸ್ ಬರುತ್ತದೆಯೇ? ಅವರು ಕೆಟ್ಟ ಮಾತನ್ನು ಆಡಿದರೂ ಅಂತ ನಾನು ಹೇಳಲಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಕೆಟ್ಟ ಮಾತನ್ನಾಡದೆ, ನೀವೇ ಒಂದು ವೇಳೆ ನೀವು ಮಂತ್ರಿಗಳಾಗದೆ ನಮ್ಮಂತೆ ಶಾಸಕರಾಗಿದ್ದರೆ ಏನು ಮಾಡುತ್ತಿದ್ದಿರಿ ಅಂತ ಹೇಳಿದರು.

ಶ್ರೀ ಎಂ.ಪಿ.ಪ್ರಕಾಶ್ : ಅದಕ್ಕೆ ನಾನು ಹೇಳಿದೆ, ಈ ರೀತಿಯಲ್ಲಿ ಉದ್ವೇಗದಲ್ಲಿ ಮಾತನಾಡುವುದು ಸರಿಯಲ್ಲ, ಮಂತ್ರಿಗಳಾಗಿ ನಾವೇನು ಕೊಳ್ಳಿ ಹೊಡೆದುಕೊಂಡು ಹೋಗುವುದಿಲ್ಲ. ಅದಕ್ಕೆ ಇಲ್ಲಿ ಅವಕಾಶವಿರುವುದಿಲ್ಲ. ಆದರೆ ನೀವು ಪ್ರತಿಪಾದನೆ ಮಾಡುವಂತಹ ವಿಷಯವನ್ನು ಸರಿಯಾಗಿ ಹೇಳಿ, ನಮ್ಮನ್ನು ನಿಮ್ಮೊಟ್ಟಿಗೆ ಸೇರಿಸಬೇಡಿ ಎಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು : ಎಲ್ಲಾ ನೀವು ನೀವೆ ಮಾತನಾಡಿದರೆ ಹೇಗೆ ?

ಶ್ರೀ ಜಯಪ್ರಕಾಶ್. ಹೆಗ್ಡೆ. ಕೆ : ಇವರೆಲ್ಲರ ಸಲಹೆಯೊಂದಿಗೆ ನನ್ನದೊಂದು ಸಲಹೆ ಏನೆಂದರೆ ಈ ತುರ್ತು ಕಾಮಗಾರಿಗೆ ಈ ಯುಟಿಲೈಸರ್ಸ್ ಸರ್ಟಿಫಿಕೇಟ್‌ಗೆ ಇವರು ಕಾಯಬಾರದು. ಹಣ ಕಳುಹಿಸಿದ ಮೇಲೆ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದು. ಅಲ್ಲಿರುವ ಹಣದಲ್ಲಿ ಕೆಲಸ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣ್ : ಸನ್ಮಾನ್ಯ ಶಾಸಕರು ನನ್ನ ಸುತ್ತೊಲೆಯನ್ನು ಸ್ವಲ್ಪ ಮಿಸ್ಟೇಕ್ ಮಾಡಿಕೊಂಡಿದ್ದಾರೆ. ಅದನ್ನು ಈಗ ಕ್ಲಾರಿಫೈ ಮಾಡುತ್ತೇನೆ. ಮಾನ್ಯ ಹಿರಿಯ ಸದಸ್ಯರು ಕೇಳಬೇಕು ನಾನು ಅತಿ ಹಿಂದುಳಿದ ನಂಜುಂಡಪ್ಪ ವರದಿಯ ಕೆಳಿಗೆ ಬರತಕ್ಕಂತಹ ಸದಾ ಬರಗಾಲ ಪೀಡಿತ ಪ್ರದೇಶವೆಂದು ಕರೆಯುವ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಕ್ಷೇತ್ರದಿಂದ ಬಂದಿರತಕ್ಕಂತಹ ಶಾಸಕ. ಎರಡನೆಯದಾಗಿ ನಾನು ಎಂ.ಎಲ್.ಎ. ಆದಮೇಲೆ 7 ತಿಂಗಳ ಕಾಲ ಕುಡಿಯುವ ನೀರಿಗಾಗಿ ಅನುಭವಿಸಿದ ಬವಣೆ, ಕಷ್ಟ, ಸಂಕಟ ಕಣ್ಣಲ್ಲಿ ನೀರು ಹಾಕಿದ್ದೇನೆ. ಉದಾಹರಣೆಗೆ ನನ್ನ ಮನೆಗೆ ಗ್ರಾಮಪಂಚಾಯ್ತಿಯವರು ಹದಿನೈದು ದಿವಸ ಕುಡಿಯುವ ನೀರನ್ನು ಬಿಡಲಿಲ್ಲ. ಹಾಗಾಗಿ ನಾನು ಸುಮಾರು ಡಿಸೆಂಬರ್ ತಿಂಗಳಲ್ಲಿ

ಮಂತ್ರಿಯಾದೆ, 12-1-2005 ಕ್ಕೆ ನನ್ನ ಅನುಭವದ ಆಧಾರದ ಮೇಲೆ. ತಾವು ದಯವಿಟ್ಟು ಹಿರಿಯ ಸದಸ್ಯರಾದ ತಾವು ಕೇಳಬೇಕು, ನಾನು ಚಿಕ್ಕವನು.....

ಶ್ರೀ ವಾಟಾಳ್ ನಾಗರಾಜ್ : ಈಗ ತಕ್ಷಣಕ್ಕೆ ತಾವು ನೀಡಿರುವಂತಹ ಆದೇಶದ ಬಗ್ಗೆ ಕ್ಲಾರಿಫೈ ಮಾಡಿ, ನೀವು ಉಪವಾಸವಿರುವುದು, ಬಿಡುವುದು ಅದನ್ನು ಆಮೇಲೆ ನೋಡಿಕೊಳ್ಳೋಣ.

ಅಧ್ಯಕ್ಷರು : ನಾಗರಾಜ್ ಅವರೇ ಮೊದಲು ಅವರು ಹೇಳುವುದನ್ನು ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಸಚಿವರು ಉತ್ತರ ಹೇಳುವುದಿಲ್ಲ ಅಂದ ಮೇಲೆ ಬೇರೆ ಮಾತೇ ಇಲ್ಲ. ಉತ್ತರ ಹೇಳತಕ್ಕಂತಹ ಬೇರೆ ಒಬ್ಬ ಮಂತ್ರಿಗಳನ್ನು ತಾವು ಕರೆಸಬೇಕು.

ಅಧ್ಯಕ್ಷರು : ಸಚಿವರು ಉತ್ತರ ಹೇಳುತ್ತಿದ್ದಾರೆ, ಅವರು ಹೇಳಲಿ, ಆಮೇಲೆ ನೀವು ಮಾತನಾಡಿ.

ಶ್ರೀ ಬಿ. ಸತ್ಯನಾರಾಯಣ್ : ದಿನಾಂಕ:12-1-2005 ರಲ್ಲಿ ಒಂದು ಕಾರ್ಯಪಡೆಯನ್ನು ರಚನೆ ಮಾಡಿದ್ದೇವೆ. ಈ ಒಂದು ಕಾರ್ಯಪಡೆಯ ವ್ಯಾಪ್ತಿಯಲ್ಲಿ ಒಂದು ತುರ್ತು ಸಂದರ್ಭ. ನಾವು ಏನು ಬೇಸಿಗೆ ಕಾಲದಲ್ಲಿ ಕುಡಿಯುವ ನೀರಿನ ತೊಂದರೆ ಸುಮಾರು ಆರು ಸಾವಿರ ಹಳ್ಳಿಗಳಲ್ಲಿ ಅನುಭವಿಸುತ್ತಿದ್ದೇವೆ ಅಂತಹ ಒಂದು ವಾತಾವರಣವನ್ನು ಕಂಡು ಪೂರ್ವಭಾವಿಯಾಗಿ ಸಮಸ್ಯಾತ್ಮಕ ಹಳ್ಳಿಗಳನ್ನು ಟ್ಯಾಕಲ್ ಮಾಡಬೇಕೆಂಬ ಉದ್ದೇಶದಿಂದ ಈ ಕಾರ್ಯಪಡೆಯನ್ನು ರಚಿಸಿದ್ದೇನೆ. ಈ ಕಾರ್ಯಪಡೆಗೆ ಹಿಂದೆ ಅಧಿಕಾರಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದ್ದೇವೆ ನಂತರ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಒತ್ತಾಯ ಬಂತು, ಆದರಂತೆ ಸನ್ಮಾನ್ಯ ಮುಖ್ಯಮಂತ್ರಿಗಳು ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಲು ಒಪ್ಪಿಕೊಂಡರು. ಜೊತೆಗೆ ಆ ತಾಲೂಕಿನ ಎಲ್ಲಾ ಭಾಗದ ಶಾಸಕರನ್ನು ಸೇರಿಸಿದ್ದೇವೆ. ಎರಡನೆಯದಾಗಿ ತಾಲೂಕು ಪಂಚಾಯಿತಿ ಅಧ್ಯಕ್ಷರು ಹಾಗೂ ಆ ಭಾಗದ ಜಿಲ್ಲಾ ಪಂಚಾಯತ್ ಸದಸ್ಯರನ್ನು ಆಹ್ವಾನಿತರಾಗಿ ಕರೆದಿದ್ದೇವೆ. ಏಕೆಂದರೆ ಅವರು ಜನಪ್ರತಿನಿಧಿಗಳು, ಅವರಿಗೂ ಕುಡಿಯುವ ನೀರಿನ ಸಮಸ್ಯೆ ಇರುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ನೋಟೀಸ್ ಕೊಡಬೇಕು. ಅವರನ್ನು ಕರೆಸಬೇಕು, ನೋಟೀಸ್ ಕೊಟ್ಟು ಅವರನ್ನು ಕರೆಸಿದಾಗ ಅವರು ದೊಡ್ಡದೊಂದು ಪಟ್ಟಿಯನ್ನು ತಂದು ಇಡುತ್ತಾರೆ. ಯಾವುದು ಎಮರ್ಜೆನ್ಸಿ ಅಂತ ಟ್ಯಾಕಲ್ ಮಾಡಲಿಕ್ಕೆ ನಮಗೆ ಬಿಡುತ್ತಾರೆಯೇ? ಸ್ವಲ್ಪ ಯೋಚನೆ ಮಾಡಿ, ನೀವು ಆಕ್ಷನ್ ಪ್ಲಾನ್ ಮಾಡಲಿಕ್ಕೆ ಯಾರನ್ನಾದರೂ ಇಟ್ಟುಕೊಳ್ಳಿರಿ. ಟಾಸ್ಕಫೋರ್ಸ್‌ನಲ್ಲಿ ಎಮರ್ಜೆನ್ಸಿಯಾಗಿ ಬೋರ್‌ವೆಲ್ ತೆಗೆಯಲಿಕ್ಕೆ ಶಾಸಕರ ಜೊತೆ ಇವರನ್ನೆಲ್ಲಾ ಕೂರಿಸಿದರೆ ಡಿಸಿಷನ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ಮಾನ್ಯ ಸಚಿವರೇ ನೀವೇ ಹೇಳಿ.

ಆಮೇಲೆ ಎರಡನೆಯದು ಏನು ಮಾಡಿದ್ದೀರಿ, ತಾಲ್ಲೂಕು ಪಂಚಾಯ್ತಿ, ದುಡ್ಡು ಇರಲಿ, ಗ್ರಾಮ ಪಂಚಾಯ್ತಿ ದುಡ್ಡು ಇರಲಿ, ಜಡ್‌ಪಿ ದುಡ್ಡು ಇರಲಿ ನೀವು ಡೈವರ್ಟ್ ಮಾಡಿಕೊಳ್ಳಬೇಡಿ ಎಂದು ಆದೇಶ ಕೊಟ್ಟಿದ್ದೀರಿ. ಅವರು ಇವತ್ತು ಒಂದು ರೂಪಾಯಿ ಉಳಿಕೆ ತೋರಿಸುತ್ತಾ ಇಲ್ಲ. ನಾನು ಪ್ರಾಕ್ಟಿಕಲ್ ಪ್ರಾಬ್ಲಮ್ ಹೇಳುತ್ತಾ ಇದ್ದೇನೆ. ಅವರು ಗ್ರಾಂಟ್ ಕೊಡಲಿಲ್ಲ. ಅಲ್ಲೆಲ್ಲಾದರೂ ದುಡ್ಡಿದ್ದರೆ ಬಳಸಿಕೊಳ್ಳಿ ಅಂದುಬಿಟ್ಟಿದ್ದಾರೆ. ಅವರ್ಯಾರೂ ದಡ್ಡರಲ್ಲ, ಮಾರ್ಚ್‌ನಲ್ಲಿ ದುಡ್ಡು ಉಳಿಸುವಂಥ ದಡ್ಡರಾರೂ ಅಲ್ಲಿ ಮೆಂಬರುಗಳಾಗಿಲ್ಲ. ಇದು ಎಮರ್ಜೆನ್ಸಿಗೆ ಶಾಸಕರಿಗೆ ಸಾಕು, ದಯಮಾಡಿ ಅಲ್ಲಿಗೆ ಕನ್‌ಫೈನ್ ಮಾಡಿ ಎಂದು ನಮ್ಮ ರಿಕ್ವೆಸ್ಟ್.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಇಲ್ಲಿ ಚರ್ಚೆಯಾದಾಗ ಶಾಸಕರ ಅಧ್ಯಕ್ಷತೆಯಲ್ಲಿ ಎಂದು ಆಯಿತೇ ಹೊರತು, ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಸದಸ್ಯರನ್ನು ಸೇರಿಸಬೇಕೆಂದು ಎಲ್ಲಿಯೂ ಚರ್ಚೆಯಾಗಲಿಲ್ಲ. ಇದು ಸ್ಪಷ್ಟ. ಇದಾದ ನಂತರ, ಇಲ್ಲಿ ಧರಣಿಯಾಯಿತು. ಎಲ್ಲಾ ಪ್ರತಿಭಟನೆಯಾಯಿತು. ಇದಾದಮೇಲೆ ಕ್ಷೇತ್ರಕ್ಕೆ ಹಣ ಬಿಡುಗಡೆ ಮಾಡುತ್ತಾರೆನ್ನುವಾಗ ಸಭೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು. ಸಭೆ ಮುಂದೂಡಿದ ದಿನದಿಂದ ಈ ಕ್ಷಣದವರೆಗೆ ಒಂದು ಕ್ಷೇತ್ರಕ್ಕೆ ಒಂದು ನಯಾಪೈಸೆ ಬಿಡುಗಡೆಯಾಗಿಲ್ಲ. ನಾವು ಕ್ಷೇತ್ರಗಳಿಗೆ ಹೇಗೆ ಹೋಗಬೇಕು, ಕುಡಿಯುವ ನೀರಿಗೆ ಭೀಕರವಾದಂಥ ಪರಿಸ್ಥಿತಿ ಇದೆ. ಕೆಟ್ಟಿರತಕ್ಕ ಕೊಳವೆ ಬಾವಿಗಳಿಗೆ ಪರ್ಯಾಯವಾಗಿ ಹಾಕತಕ್ಕ ಪರಿಸ್ಥಿತಿ ಇಲ್ಲ. ಇದೆಲ್ಲಾ ಇರುವಾಗ ಕನಿಷ್ಟ ಒಂದು ಕ್ಷೇತ್ರಕ್ಕೆ ಎರಡು ಕೋಟಿ ರೂಪಾಯಿಗಳನ್ನಾದರೂ ಕೊಡಿ ಎಂದು ಕೇಳಿದೆವು. ನೀವು ಎಷ್ಟಾದರೂ ಕೊಡಿ, ಕೊಡಲೇ ಇಲ್ಲವೇ. ಇದುವರೆಗೆ ಒಂದು

ನಯಾಪೈಸೆ ಬಿಡುಗಡೆ ಮಾಡಲಿಲ್ಲ. ಆದ್ದರಿಂದ, ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಅವರಿಗೆ ಹೇಳುತ್ತೇನೆ. ಈ ರೀತಿ ಸಮಿತಿ ಆಗುವುದಾದರೆ ಈ ಕೂಡಲೇ ತಾವು ಹೇಳಿಕೆ ಕೊಟ್ಟು ಸಮಿತಿಯನ್ನು ರದ್ದು ಮಾಡಿದ್ದೇವೆಂದು ಹೇಳಿ. ಈ ಸಂದರ್ಭದಲ್ಲಿ ತಾವು ಏನೇ ಉತ್ತರ ಕೊಡಿ, ಪ್ರತಿ ಕ್ಷೇತ್ರಕ್ಕೆ ಇಷ್ಟು ಹಣವನ್ನು ಕುಡಿಯುವ ನೀರಿಗೆ ಬಿಡುಗಡೆ ಮಾಡಿದ್ದೇವೆಂದು ನೇರವಾಗಿ ತಾವು ಹೇಳಬೇಕು. ಇಲ್ಲಿ ಹಣಕಾಸಿನ ಸಚಿವರಾದ ಉಪಮುಖ್ಯಮಂತ್ರಿಗಳೂ ಇದ್ದಾರೆ, ಅವರಲ್ಲಿಯೂ ನಾವು ಕಳಕಳಿಯ ಮನವಿ ಮಾಡುತ್ತೇವೆ. ಪ್ರತಿ ಜಿಲ್ಲೆಗೆ ಇಷ್ಟು ಎಂದು ಬಿಡುಗಡೆ ಮಾಡಲಿ.

ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ):- ಮಾನ್ಯ ಅಧ್ಯಕ್ಷರೇ, ಈ ಚುನಾವಣೆಯಾದ ನಂತರ, ಕಳೆದ 10 ತಿಂಗಳಲ್ಲಿ ಯಾವುದೇ ಒಂದು ಊರಿನಲ್ಲಿ ಅಥವಾ ಅಡವಿಯಲ್ಲಿ ಕುಡಿಯುವ ನೀರಿಗಾಗಿ ಬೋರ್ ಹಾಕಬೇಕೆಂದು ಹೇಳಿದರೆ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಫೋನ್ ಮಾಡಿಯಾಗಲೀ ಅಥವಾ ಪತ್ರದ ಮುಖಾಂತರವಾಗಲೀ ಹೇಳಿದರೆ ಜಿಲ್ಲಾ ಪಂಚಾಯ್ತಿ ಸದಸ್ಯರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ, ಶಾಸಕರು ಹೇಳಿದಲ್ಲಿ ಕೊಳವೆ ಬಾವಿ ತೋಡಿಸಬಾರದು, ತೋಡಿಸಿದರೆ ಅದಕ್ಕೆ ಪೇಮೆಂಟ್ ಮಾಡುವುದಕ್ಕೆ ಅಲೋ ಮಾಡುವುದಿಲ್ಲ. ಈ ಮಟ್ಟಕ್ಕೆ ಹೋಗಿದ್ದಾರೆ, ಅದಕ್ಕಾಗಿ, ಮತ್ತೆ ಅವರನ್ನು ತಂದು ಇದರಲ್ಲಿ ಸೇರಿಸಿಗೊಂದಲ ಸೃಷ್ಟಿ ಮಾಡುವುದಕ್ಕಿಂತಲೂ, ಇದನ್ನು ಮಾಡದೇ ಇರುವುದೇ ಉತ್ತಮ.

ಶ್ರೀ ಬಿ. ಸತ್ಯನಾರಾಯಣ : ಸನ್ಮಾನ್ಯ ಅಧ್ಯಕ್ಷರೇ, ನಾವು ತುರ್ತು ನೀರಿನ ಕೊರತೆಯನ್ನು ನಿವಾರಣೆ ಮಾಡುವುದಕ್ಕಾಗಿ ಯಾವ ಯಾವ ರೀತಿಯಲ್ಲಿ ಹಣ ಉಪಯೋಗಿಸಬೇಕು, ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಲ್ಲಿ ಬರತಕ್ಕಂಥ ವಾರ್ಷಿಕ ಆಯವ್ಯಯದಲ್ಲಿ ಯೋಜನೆಗಳ ನಿರ್ವಹಣೆಗಾಗಿ ಒದಗಿಸಿದ ಅನುದಾನ, ಜಿಲ್ಲಾಧಿಕಾರಿಗಳಿಗೆ ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಬಿಡುಗಡೆಯಾಗಿರುವ ಅನುದಾನ, ಹಾಲಿ ನಿಯಮಾವಳಿಗಳ ಪ್ರಕಾರ ನಿರ್ವಹಣೆ, ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಹಾಗೂ ಅನುದಾನದ ಕೊರತೆ ಕಂಡುಬಂದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳ ತಮ್ಮ ಸ್ವಂತ ಸಂಪನ್ಮೂಲ ಮತ್ತು ಹನ್ನೊಂದನೇ ಹಣಕಾಸು, ಸ್ಟಾಂಪ್ ಡ್ಯೂಟಿ, ರಾಜ್ಯಸರ್ಕಾರ ಗ್ರಾಮ ಪಂಚಾಯ್ತಿಗಳಿಗೆ ನೀಡುವ ಅನುದಾನ ಇತ್ಯಾದಿ ಹಣವನ್ನು ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಗೆ ಕಾರ್ಯಪಡೆ ಮೂಲಕ ಉಪಯೋಗಿಸಲು ಸೂಚಿಸಿದೆ. ಹೀಗಾಗಿ ತಾವು ಕಾರ್ಯಪಡೆಯ ಅಧ್ಯಕ್ಷರಾಗಿ, ಸಭೆಯನ್ನು ಯಾವಾಗ ಬೇಕಾದರೂ

ಕರೆಯುವುದಕ್ಕೆ ಅವಕಾಶವಿದೆ. ಇದಕ್ಕೆ ನಾವು ಕಾಲ ಮಿತಿ ಮಾಡಿಲ್ಲ, ಇವತ್ತು ನಿಮಗೆ ತೊಂದರೆ ಬಂದಿದೆ ಎಂದತಕ್ಷಣ ಇವತ್ತು ರಾತ್ರಿಯೇ ಸಭೆ ಕರೆದು, ಆ ಸಭೆಗೆ ಸದಸ್ಯರು ಬರಲಿ ಬಿಡಲಿ, ತೀಮಾನ ತೆಗೆದುಕೊಳ್ಳುವ ಅಧಿಕಾರ ನಿಮಗಿದೆ.

ಶ್ರೀ ವಾಟಾಳ್ ನಾಗರಾಜ್: ನಾವು ಅಧಿಕಾರದ ಪ್ರಶ್ನೆ ಕೇಳಲಿಲ್ಲ. ನಾವು ಅರ್ಧರಾತ್ರಿಯಲ್ಲಿ ಸಭೆ ಸೇರಿ, ತೀರ್ಮಾನ ತೆಗೆದುಕೊಂಡು ಕೂಡಲೇ ಕೊಳವೆ ಬಾವಿ ತೋಡಿಸಬಹುದು ಎಂಬುದನ್ನು ಕೇಳಲಿಲ್ಲ. ಅದಕ್ಕೆ ನಾವು ತಯಾರಾಗೇ ಇಲ್ಲ. ಆದರೆ ತಮ್ಮ ಮೂಲಕ ಅವರಿಗೆ ಸ್ಪಷ್ಟವಾಗಿ ಏನು ಹೇಳುತ್ತೇವೆಂದರೆ, ಮೊದಲು ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ಎಂದು ಇತ್ತು. ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಎನ್ನುವುದು ಇಲ್ಲಿ ಚರ್ಚೆಯಾಗಲಿಲ್ಲ. ನೀವು ಇದನ್ನು ತಿರುಗಿಸಬಾರದು. ಎರಡನೆಯದು, ಇಷ್ಟಿಷ್ಟು ಹಣವನ್ನು ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಬೇಕು; ಜಿಲ್ಲೆಗೆ ಹಣ ಬಿಡುಗಡೆ ಮಾಡಬೇಕು. ಜಿಲ್ಲೆಗೆ ಹಣ ಬಿಡುಗಡೆ ಮಾಡಬೇಕು ಎಂದು ಸ್ಪಷ್ಟವಾಗಿ ಇಲ್ಲಿ ಚರ್ಚೆಯಾಗಿತ್ತು. ಅದರ ಬಗ್ಗೆ ತಾವು ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂಬುದನ್ನು ಹೇಳಿ. ಇಲ್ಲವಾದರೆ, ಈ ತಕ್ಷಣದಿಂದ ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ತಾವು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ದಯವಾಡಿ ಇಷ್ಟು ಹೇಳಿ. ಹಿಂದಿನ ಅಧಿವೇಶನದಿಂದ ಇವತ್ತಿನವರೆಗೆ ಇಷ್ಟು ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ಇಷ್ಟು ಹಣ ಖರ್ಚಾಗಿದೆ ಎಂಬ ಬಗ್ಗೆ ಒಂದು ಅಂಕಿ ಹೇಳಿಬಿಡಿ ಸಾಕು. ಇಡೀ ರಾಜ್ಯಕ್ಕೆ ಹಿಂದಿನ ಅಧಿವೇಶನದಿಂದ ಇವತ್ತಿನವರೆಗೆ, ಶಾಸಕರ ಅಧ್ಯಕ್ಷತೆಯಲ್ಲಿ ನಡೆದಂಥ ಸಭೆಯಲ್ಲಿ ಇಷ್ಟು ಮಂಜೂರಾತಿಯಾಗಿದೆ, ಇಷ್ಟು ಹಣವನ್ನು ನಾವು ಖರ್ಚು ಮಾಡಿದ್ದೇವೆ, ಒಂದು ಫಿಗರ್ ಹೇಳಿ, ನಾವು ಸಮಾಧಾನ ಮಾಡಿಕೊಳ್ಳುತ್ತೇವೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು):– ಸನ್ಮಾನ್ಯ ಅಧ್ಯಕ್ಷರೇ, ಅವರು ಉತ್ತರ ಹೇಳುತ್ತಾ ಇದ್ದಾರೆ. ಅವರು ಆ ಅಂಕಿಅಂಶವನ್ನು ಕೊಡುವುದಕ್ಕೂ ಇವರು ಬಿಡುತ್ತಾ ಇಲ್ಲ. ಎಲ್ಲಾ ಮಾನ್ಯ ಹಿರಿಯ ಸದಸ್ಯರು ಮಧ್ಯೆ ಮಧ್ಯೆ ಎದ್ದುನಿಂತು, ನೀವು ಇದು ಹೇಳಿ, ಅದು ಹೇಳಿ ಎಂದು ಹೇಳಿದರೆ, ಹೇಗೆ ಉತ್ತರ ಕೊಡುವುದಕ್ಕಾಗುತ್ತೆ? ನೀವು ಹೇಳಬೇಕಾದುದನ್ನೆಲ್ಲಾ ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು

ಹೇಳಿದ್ದಾರೆ. ಹೋದ ಅಸೆಂಬ್ಲಿಯಿಂದ ಈ ಅಸೆಂಬ್ಲಿಯವರೆಗೆ ಎಷ್ಟು ಖರ್ಚು ಮಾಡಿದ್ದೀರೆಂದು ಕೇಳಿದ್ದಾರೆ. ಅದನ್ನು, ಅವರು ಹೇಳಬೇಕೇ ಬೇಡವೇ? ವಾಟಾಳ್ ನಾಗರಾಜ್‌ರವರು ಎಷ್ಟು ದುಡ್ಡು ಕೊಟ್ಟಿದ್ದೀರಿ ಎಂದು ಕೇಳಿದ್ದಾರೆ, ಅದಕ್ಕೆ ಹೇಳಬೇಕೇ ಬೇಡವೇ? ಅದನ್ನು ಹೇಳುವುದಕ್ಕೇ ಬಿಡುತ್ತಾ ಇಲ್ಲ. ಹೀಗಾದರೆ, ಎಲ್ಲಿಂದ ಹೇಳುವುದಕ್ಕಾಗುತ್ತೆ? ನೀವೆಲ್ಲಾ ಹಿರಿಯ ಸದಸ್ಯರು, ಸ್ವಲ್ಪ ಸಹಕಾರ ಕೊಡಿ. ಮಧ್ಯದಲ್ಲಿ ನೀವು ಈ ತರಹ ಮಾಡಿದರೆ ಹೇಳುವುದಕ್ಕೂ ಕಷ್ಟವಾಗುತ್ತೆ ಉತ್ತರ ಹೇಳುವುದಕ್ಕೂ ಕಷ್ಟವಾಗುತ್ತೆ. ನಿಮ್ಮನ್ನು ಸಮಾಧಾನ ಮಾಡುವುದಕ್ಕೂ ಕಷ್ಟವಾಗುತ್ತೆ. ಆದ್ದರಿಂದ, ನಿಮಗೆ ಸಮಾಧಾನಕರವಾದಂಥ ಉತ್ತರ ಕೊಡುತ್ತಾರೆ. ಹಣದ ಕೊರತೆಯಿಂದ ಕುಡಿಯುವ ನೀರಿಗೆ ತೊಂದರೆಯಾಗಿದೆ ಎನ್ನತಕ್ಕಂಥ ಪರಿಸ್ಥಿತಿ ಇಲ್ಲ. ಹಣದ ಕೊರತೆಯಿಂದ ಯಾವ ಜಿಲ್ಲೆಗೂ ಕುಡಿಯುವ ನೀರಿಗೆ ತೊಂದರೆ ಆಗಿಲ್ಲ. ಯಾವ ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಹಣ ಬೇಕಾಗುತ್ತದೆ, ಅದನ್ನು ಸರ್ಕಾರ ಕೊಡುವುದಕ್ಕೆ ತಯಾರಾಗಿದೆ, ಕೊಡುತ್ತೇವೆ.

ಶ್ರೀ ಆರಗ ಜ್ಞಾನೇಂದ್ರ : ನೀವು ಹೀಗೆ ಹೇಳಿ, ಹೇಳಿ ಪತ್ರಿಕೆಯವರು ಬರೆದು ಜನರು ನಮ್ಮನ್ನು ಅನುಮಾನದಿಂದ ನೋಡುವ ಹಾಗೆ ಆಗುತ್ತಿದೆ. ಎಲ್ಲಿ ಕೊರತೆ ಇಲ್ಲ ಹೇಳಿ, ನಾವು ಜನರನ್ನು ನೋಡಿಕೊಂಡಿದ್ದೇವೆ. ಆದರೆ, ನೀವು ಜನತೆಗೆ ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಅನುಮಾನ ನಿರ್ಮಾಣ ಮಾಡುತ್ತಾ ಇದ್ದೀರಿ.

ಶ್ರೀ ಸಿದ್ದರಾಮಯ್ಯ: ನೀವು ಬಹಳ ಒಳ್ಳೆಯ ಶಾಸಕರಿದ್ದೀರಿ. ನಿಮ್ಮನ್ನು ಏಕೆ ಅನುಮಾನದಿಂದ ನೋಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ನೀವು ಈ ತರಹ ಹಣ ಕೊಟ್ಟಿದ್ದೇವೆ, ಹಣ ಕೊಟ್ಟಿದ್ದೇವೆ ಹಣಕ್ಕೇನೂ ಕೊರತೆ ಇಲ್ಲವೆಂದು ಹೇಳಿದರೆ. . . .

ಶ್ರೀ ಸಿದ್ದರಾಮಯ್ಯ : ನೀವೇ ಅಂಡರ್ ಎಸ್ಟಿಮೇಟ್ ಮಾಡಿಕೊಂಡರೆ ನಾವೇನು ಮಾಡುವುದಕ್ಕಾಗುತ್ತೆ?

ಶ್ರೀ ಆರಗ ಜ್ಞಾನೇಂದ್ರ : ನಾವು ಅಂಡರ್ ಎಸ್ಟಿಮೇಟ್ ಮಾಡುತ್ತಾ ಇಲ್ಲ, ಈ ರಾಜ್ಯದ ಜನತೆಗೆ ನೀವು ಅನುಮಾನ ನಿರ್ಮಾಣ ಮಾಡುವ ಹಾಗೆ ಮಾಡುತ್ತಿದ್ದೀರಿ.

ಅಧ್ಯಕ್ಷರು: ಅವರು ಸಮಗ್ರವಾಗಿ ಉತ್ತರ ಕೊಡಲಿ, ಏನೆಂದರೆ, ಒಂದು ಗಂಟೆ ಅವಧಿಯಲ್ಲಿ ಪ್ರಶ್ನೆಗಳು ಮುಗಿಯಬೇಕು. ಈಗಾಗಲೇ ಎಷ್ಟು ಸಮಯ ತೆಗೆದುಕೊಂಡಿದೆ ಎಂಬುದನ್ನು ಯೋಚನೆ ಮಾಡಿ, ಅದಲ್ಲದೇ ಇದ್ದರೆ, ನೀವೇನಾದರೂ ಅರ್ಧ ಗಂಟೆಯ ಚರ್ಚೆಗಾದರೂ ಕೇಳಿ. ಸುಮ್ಮನೇ ಈ ತರಹವಾದರೆ, ಯಾವುದೂ ನೆಟ್ಟಗಾಗುವುದಿಲ್ಲ.

ಶ್ರೀ ಬಿ. ಸತ್ಯನಾರಾಯಣ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಎತ್ತಿದಂಥ ಪ್ರಶ್ನೆಗೆ, ಸುಮಾರು ಎರಡು ತಿಂಗಳಲ್ಲಿ ಜಿಲ್ಲಾ ಪಂಚಾಯ್ತಿಗಳ ಮುಖಾಂತರ 76 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಸರ್ಕಾರ ಒದಗಿಸಿದೆ. ಖರ್ಚಿನ ವಿವರಗಳನ್ನು ಅವರು ಕೊಡಬೇಕು. ಎಂ.ಎನ್.ಪಿ.ನಲ್ಲಿ 5.24, ಎ.ಆರ್.ಡಬ್ಲ್ಯು.ಎಸ್.ನಲ್ಲಿ 37 ಕೋಟಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಬಿಡುಗಡೆ ಮಾಡುವುದು ಬೇಡ. ಖರ್ಚಾಗಿರುವಂಥ ಅಂಕಿಅಂಶ ಬೇಕು.

ಅಧ್ಯಕ್ಷರು : ಅವರು ಏನು ಹೇಳುತ್ತಾರೋ, ಅದನ್ನು ಹೇಳಿಬಿಡಲಿ. ಆನಂತರ ನೀವು ಕೇಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಷ್ಟು ಖರ್ಚಾಗಿದೆ ಎಂಬುದನ್ನು ಅಧಿಕಾರಿಗಳು ಅವರಿಗೆ ಬರೆದುಕೊಡಲಿ. ಅವರು ಖರ್ಚು ಮಾಡಿಲ್ಲ ಸಾರ್.

– ಗೊಂದಲ –

ಅಧ್ಯಕ್ಷರು : ಅವರು ಹೇಳುತ್ತಾರೆ ತಡೆಯಿರಿ. ಅವರು ಜಿಲ್ಲಾವಾರು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ.

– ಗೊಂದಲ –

ಶ್ರೀ ಅರಗ ಜ್ಞಾನೇಂದ್ರ : ಅರ್ಧ ಗಂಟೆಯ ಚರ್ಚೆಗೆ ಅವಕಾಶ ಮಾಡಿಕೊಡಿ.

– ಗೊಂದಲ–

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಯಡಿಯೂರಪ್ಪನವರು ಹೇಳುವುದರಲ್ಲಿ ಸತ್ಯಾಂಶ ಇದೆ. ದುಡ್ಡು ಕೊಡುವುದು ಮುಖ್ಯ ಅಲ್ಲ, ಅಲ್ಲಿ ಅವರು ಎಷ್ಟು ಖರ್ಚು ಮಾಡಿದ್ದಾರೆ ಎಂಬುದು ಮುಖ್ಯ.

ಅಧ್ಯಕ್ಷರು : ಅರ್ಧಗಂಟೆಯ ಚರ್ಚೆಗೆ ನಾನು ಕಾಲಾವಕಾಶ ನೀಡುತ್ತಾ ಇದ್ದೇನೆ. ಮಧ್ಯಾಹ್ನ ಇದನ್ನು ತೆಗೆದುಕೊಳ್ಳೋಣ. ಈಗ ಮುಂದಿನ ಪ್ರಶ್ನೆಗೆ ಹೋಗೋಣ. ಬೇರೆ ಬೇರೆ ಪ್ರಶ್ನೆಗಳು ಇವೆ. ಇದರ ಬಗ್ಗೆ ಮಧ್ಯಾಹ್ನ ನಿಗದಿ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಎಷ್ಟು ಹಣ ಖರ್ಚಾಗಿದೆ ಎಂಬ ಅಂಕಿ ಅಂಶಗಳನ್ನು ಹೇಳಲಿ.

ಅಧ್ಯಕ್ಷರು : ಮಧ್ಯಾಹ್ನ ಅವಕಾಶ ಕೊಡುತ್ತಾ ಇದ್ದೇನೆ. ಅರ್ಧ ಗಂಟೆ ಕಾಲ ಕೊಡುತ್ತಿದ್ದೇನೆ. ಈಗ ಬೇರೆ ಪ್ರಶ್ನೆಗಳು ಇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಈಗಾಗಲೇ ಅರ್ಧ ಗಂಟೆ ಚರ್ಚೆಯಾಗಿದ್ದಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆಂಬ ಬಗ್ಗೆ ಅಂಕಿ ಅಂಶ ಹೇಳಲಿ.

–ಗೊಂದಲ –

ಅಧ್ಯಕ್ಷರು : ಈಗ ಸಭೆ ನಡೆಯುವುದಕ್ಕೆ ಅವಕಾಶ ಕೊಡಿ. ಈಗ ಅನೇಕ ಜನ ಅನೇಕ ಪ್ರಶ್ನೆಗಳನ್ನು ಎತ್ತಿದ್ದೀರಿ. ನಾನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡುತ್ತೇನೆ. ಆಗ, ಅವರು ಸಮಗ್ರವಾಗಿ ಉತ್ತರ ಕೊಡುತ್ತಾರೆ.

ಶ್ರೀ ಜಿ.ಎ.ಶ್ರೀರಾಮರೆಡ್ಡಿ : ಅವರು ಏನು ಹೇಳುತ್ತಾರೋ ಅದನ್ನು

(ಗೊಂದಲ)

ಅಧ್ಯಕ್ಷರು : ಒಂದೊಂದು ಸಲ ಒಂದೊಂದು ರೀತಿ ಮಾತನಾಡಬೇಡಿ. ಇದು ಬಹಳ ಗಂಭೀರವಾದ ವಿಚಾರ. ಅದಕ್ಕೋಸ್ಕರ ಇದರ ಬಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡುತ್ತೇನೆ. ಈಗ ಅನೇಕ ವಿಚಾರಗಳನ್ನು ನೀವು ಪ್ರಸ್ತಾಪ ಮಾಡಿದ್ದೀರಿ, ಅದಕ್ಕೆಲ್ಲಾ ಅಧಿಕಾರಿಗಳ ಜೊತೆ ಅವರು ಚರ್ಚೆ ಮಾಡಿ ಮತ್ತು ಮಾಹಿತಿ ಕೊಡಲು

ಅನುಕೂಲವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮಧ್ಯಾಹ್ನ ತೆಗೆದುಕೊಳ್ಳೋಣ. Let us go to next question.

152 (2260) **ಶ್ರೀರಾಮರೆಡ್ಡಿ ಜಿ.ವಿ.**

ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) ಗ್ರಾಮ ಪಂಚಾಯ್ತಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಪದೇ ಪದೇ ಮುಷ್ಕರಗಳ ಮೊರೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದ್ದಲ್ಲಿ, ಗ್ರಾಮ ಪಂಚಾಯ್ತಿ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಡಾ|| ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು)

ಅ) ಹೌದು

ಆ) ಗ್ರಾಮ ಪಂಚಾಯತಿ ನೌಕರರ ಹಲವು ಬೇಡಿಕೆಗಳಲ್ಲಿ ಬಹುತೇಕ ಬೇಡಿಕೆಗಳನ್ನು ಈಡೇರಿಸಲಾಗಿದೆ.

1) ಗ್ರಾಮ ಪಂಚಾಯತಿ ಸಿಬ್ಬಂದಿಯ ಮಾಸಿಕ ವೇತನವನ್ನು ಸರ್ಕಾರದ ಅನುದಾನದ ಮೊತ್ತದಿಂದ ಒಟ್ಟಾರೆ ಗ್ರಾಮಪಂಚಾಯತಿ ನಿಧಿಯ ಶೇಕಡ 40ರಷ್ಟಕ್ಕೆ ಮೀರದಂತೆ ಪಾವತಿಸಲು ಸುತ್ತೋಲೆ ಹೊರಡಿಸಲಾಗಿದೆ. (ಗ್ರಾಅಪ 230 ಗ್ರಾಪಂಅ 04 ದಿನಾಂಕ : 14.6.04)

2) ಗ್ರಾಮ ಪಂಚಾಯತಿ ಸಿಬ್ಬಂದಿಯ ಮಾಸಿಕ ವೇತನದ ಮೊತ್ತವನ್ನು ದಿನಾಂಕ : 20.06.2003 ರಿಂದ ಪರಿಷ್ಕರಿಸಲಾಗಿದೆ ಹಾಗೂ ರಜಾ ಸೌಲಭ್ಯದ ಬಗ್ಗೆ ಸುತ್ತೋಲೆ ಹೊರಡಿಸಲಾಗಿದೆ. (ಗ್ರಾಅಪ 47 ಗ್ರಾಪಂಸಿ 03, ದಿನಾಂಕ : 20.6.03 ಹಾಗೂ ಗ್ರಾಅಪ 14 ಗ್ರಾಪಂಸಿ 03 ದಿನಾಂಕ : 15.7.03)

3) ಮೃತ ಹಾಗೂ ನಿವೃತ್ತ ಸಿಬ್ಬಂದಿಗೆ ಲಭ್ಯವಾಗುವ ಮರಣೋತ್ತರ ಉಪದಾನವನ್ನು ಸ್ಥಳೀಯವಾಗಿ ಮಂಜೂರು ಮಾಡಲು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

4) ಗ್ರೇಡ್-2 ವೃಂದದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ ಹುದ್ದೆಯ ಒಟ್ಟಾರೆ ವೃಂದಬಲದ ಶೇಕಡ 40 ರಷ್ಟು ಹುದ್ದೆಗಳಿಗೆ ಗ್ರಾಮ ಪಂಚಾಯತಿಯ ಬಿಲ್ ಕಲೆಕ್ಟರ್ ವೃಂದದಿಂದ ಅರ್ಹ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ವೃಂದ ಮತ್ತು ನೇಮಕಾತಿ